**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

**ಚಿತ್ರದುರ್ಗ**

**ಸಿ.ಸಿ.2350/2021**

| | | |
|---|---|---|
| ಸಾಕ್ಷಿದಾರರ ಹೆಸರು | - ಕೆ ಓಂಕಾರನಾಯ್ಕ | PW:14 |
| ತಂದೆ ಹೆಸರು | - ಲೇಟ್ ಸೋಮ್ಲನಾಯ್ಕ | CW:35 |
| ವಯಸ್ಸು | - 65 ವರ್ಷ | ಪ್ರಮಾಣ ವಚನ ಬೋದಿಸಿದ |
| ಉದ್ಯೋಗ | - ನಿವೃತ್ತ ಡಿ ವೈ ಎಸ್ ಸಿ | ದಿ: 06/08/2026 |
| ವಾಸ | - ಸಿ ಜೆ ಹಳ್ಳಿ ಕೂಡ್ಲಿಗಿ ತಾಲ್ಲೂಕು, ವಿಜಯನಗರ | |

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ಸೆಪ್ಟೆಂಬರ್ 2009 ರಿಂದ ಜೂನ್ 2012 ರವರೆಗೆ ಚಿತ್ರದುರ್ಗ ದ ನಗರ ಠಾಣೆಯ ಪೊಲೀಸ್ ನಿರೀಕ್ಷಕರಾಗಿ ಕಾರ್ಯನಿರ್ವಹಿಸುತಿದ್ದೆ. ಈ ಪ್ರಕರಣಕ್ಕೆ ಸಂಬಂದಿಸಿದಂತೆ ದಿಃ18.02.2012 ರಂದು ಸಂಜೆ 6 ಗಂಟೆಗೆ ನಾನು ಠಾಣಾದಿಕಾರಿ ಇದ್ದು ಚಾಸಾ.1 ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಪಡೆದು ಠಾಣಾ ಮೊಕದ್ದಮೆಯಾಗಿ ದಾಖಲುಮಾಡಿಕೊಂಡು ಪ್ರ ವ ವರದಿ ತಯಾರಿಸಿದ್ದೇನೆ ಸದರಿ ದೂರನ್ನು ಸಾಕ್ಷಿ ಗುರುತಿಸಿದ್ದು ದೂರನ್ನು ಈಗಾಗಲೇ ನಿಪಿ.2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿ ನಿಪಿ.2(ಬಿ) ಎಂದು ಗುರುತಿಸಲಾಯಿತು. ಪ್ರ ವ ವರದಿ ನಿಪಿ.128 ಸಾಕ್ಷಿಯ ಸಹಿ ನಿಪಿ.128(ಎ) ಎಂದು ಗುರುತಿಸಲಾಯಿತು.

2. ದಿಃ08.02.2012 ರಂದು ಚಾಸಾ.21 ರವರು ನೀಡಿದ ಆಡಿಟ್ ವರದಿಯನ್ನು ಪಡೆದು ಕಡತದಲ್ಲಿ ಅಡವಡಿಸಿಕೊಂಡಿದ್ದೆ. ಸದರಿ ಆಡಿಟ್ ವರದಿಯನ್ನು ಸಾಕ್ಷಿ ಗುರುತಿಸಿದ್ದು ನಿಪಿ.131 ಎಂದು ಗುರುತಿಸಲಾಯಿತು. ದಿಃ21.02.2012 ರಂದು

ಚಾಸಾ.1 ಠಾಣೆಗೆ ಹಾಜರಾಗಿ ಗಣಕೀಕೃತ ಮುಂದುವರೆದ ದೂರು ಹೇಳಿಕೆ ನೀಡಿದ್ದು ಪಡೆದಿದ್ದೆ. ಕಡತದಲ್ಲಿ ಅಳವಡಿಸಿಕೊಂಡಿದ್ದೆ. ಸದರಿ ಮುಂದುವರೆದ ದೂರು ಹೇಳಿಕೆ ಸಾಕ್ಷಿ ಗುರುತಿಸಿದ್ದು ನಿಪಿ.129 ಸಾಕ್ಷಿಯ ಸಹಿ ನಿಪಿ.129(ಎ) ಎಂದು ಗುರುತಿಸಲಾಯಿತು. ಅದೇ ದಿನ ಘಟನಾ ಸ್ಥಳಕ್ಕೆ ಚಾಸಾ.2 ಮತ್ತು 3 ರವರನು ಪಂಚರಾಗಿ ಬರಮಾಡಿಕೊಂಡು ಅವರುಗಳ ಸಮಕ್ಷಮ ಚಾಸಾ.1 ತೋರಿಸಿದ ಸ್ಥಳದಲ್ಲಿ ಬೆಳಗ್ಗೆ 11 ರಿಂದ 11.45 ರವರೆಗೆ ಸ್ಥಳ ಪಂಚನಾಮೆ ಜರುಗಿಸಿದ್ದೆ ಸದರಿ ಸ್ಥಳ ಪಂಚನಾಮೆ ಸಾಕ್ಷಿ ಗುರುತಿಸಿದ್ದು ಈಗಾಗಲೇ ನಿಪಿ.1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿ ನಿಪಿ.1(ಸಿ) ಎಂದು ಗುರುತಿಸಲಾಯಿತು. ನಿಪಿ.1 ಕ್ಕೆ ಸಂಬಂದಿಸಿದಂತೆ ಸ್ಥಳದ ನಕ್ಷೆ ತಯಾರಿಸಿದ್ದೆ. ಸಾಕ್ಷಿ ಗುರುತಿಸಿದ್ದು ನಿಪಿ.130 ಸಾಕ್ಷಿಯ ಸಹಿ ನಿಪಿ.130(ಎ) ಎಂದು ಗುರುತಿಸಲಾಯಿತು.

3. 27.02.2012 ರಂದು ಚಾಸಾ.28 ರಿಂದ 31 ಸಿಬ್ಬಂದಿಗಳ ಜೊತೆ ಆರೋಪಿಗಳ ಪತ್ತೆಗಾಗಿ ಮಾಹಿತಿ ಮೇರೆಗೆ ನಗರದ ವಿಜ್ಞಾನ ಕಾಲೇಜಿನ ಆವರಣದಲ್ಲಿ ಎ-1 , 5 ರಿಂದ 7 ರವರುಗಳು ಇರುವಿಕೆ ಬಗ್ಗೆ ಮಾಹಿತಿ ಪಡೆದು ನೋಡಲಾಗಿ ಆರೋಪಿಗಳು ಇದ್ದು ಅವರುಗಳನ್ನು ಸುತ್ತುವರೆದು ದಾಳಿ ನಡೆಸಿ ವಶಕ್ಕೆ ಪಡೆದು ಠಾಣೆಗೆ ಕರೆತಂದು ವಿಚಾರಣೆ ಮಾಡಲಾಗಿ ಈ ಪ್ರಕರಣಕ್ಕೆ ಸಂಬಂದಿಸಿದ ಮೇಲೆ ಹೇಳಿದ ಆರೋಪಿಗಳು ಎಂದು ಕಂಡುಬಂದು ಕಾರಣ ದಸ್ತಗಿರಿ ಕ್ರಮ ಜರುಗಿಸಿ ದಸ್ತಗಿರಿ ಮಾಡಿ , ನ್ಯಾಯಾಂಗ ಬಂದನಕ್ಕೆ ಹಾಜರುಪಡಿಸಿದ್ದೆ.

4. ಅದೇ ದಿನ ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಆರೋಪಿಗಳನ್ನು ವಿಚಾರಣೆಗಾಗಿ ಪೊಲೀಸರ ವಶಕ್ಕೆ ಪಡೆದಿದ್ದೆ. 28.02.2012 ರಂದು ಸಾಕ್ಷಿ ಮಾನಸ ರಂಜನ್ ಠಾಣೆಗೆ ಹಾಜರಾಗಿ ದಾಖಲೆಗಳನ್ನು ಹಾಜರುಪಡಿಸಿದ್ದು ಚಾಸಾ.4 ಮತ್ತು 5 ರವರ ಸಮಕ್ಷಮ ಅಮಾನತ್ ಪಂಚನಾಮೆ ಅಡಿ ಬೆಳಗ್ಗೆ 11 ಗಂಟೆಯಿಂದ 12.15 ರವರೆಗೆ ಅಮಾನತ್ ಪಂಚನಾಮೆ ಜರುಗಿಸಿ ಮಾಲುಗಳನ್ನು ಅಮಾನತ್ ಪಡಿಸಿಕೊಂಡು ಮಾಲುಪಟ್ಟಿಯಡಿ ಅಳವಡಿಸಿಕೊಂಡಿದ್ದೆ ಸದರಿ

ದಾಖಲೆಗಳನ್ನು ಸಾಕ್ಷಿ ಗುರುತಿಸಿದು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.3(ಬಿ) ಎಂದು ಗುರುತಿಸಲಾಯಿತು. ನಿಪಿ.3 ರಡಿ ಅಮಾನತ್ ಪಡಿಸಿಕೊಂಡ ದಾಖಲೆಗಳನ್ನು ಸಾಕ್ಷಿ ಗುರುತಿಸಿದ್ದು ಈಗಾಗಲೇ ನಿಪಿ.6 ರಿಂದ 90 ಎಂದು ಗುರುತಿಸಲಾಗಿದೆ.

5. ದಿಃ29.02.2012 ರಂದು ಚಾಸಾ.34 ರವರೊಟ್ಟಿಗೆ ಇಲಾಖಾ ವಾಹನದಲ್ಲಿ 5 ನೇ ಆರೋಪಿ ಮನೆ ಶೋದನೆ ಮಾಡುವ ಬಗ್ಗೆ ನ್ಯಾಯಾಲಯದಿಂದ ಅನುಮತಿ ಪಡೆದು ಅದೇ ದಿನ 5 ನೇ ಆರೋಪಿ ಮನೆಯನ್ನು ತಲಾಶ್ ಮಾಡಲಾಗಿದ್ದು ಯಾವುದೇ ಮಾಲು ದಾಖಲೆಗಳು ಸಿಕ್ಕಿರುವುದಿಲ್ಲ ಆ ಬಗ್ಗೆ 5 ನೇ ಆರೋಪಿಯ ಮನೆಯಲ್ಲಿ ಸ್ತಳ ಪಂಚನಾಮೆ ಜರುಗಿಸಿ ಚಾಸಾ.34 ಸ್ತಳ ಪಂಚನಾಮೆ ಒಟ್ಟಿಗೆ ವರದಿ ನೀಡಿದ್ದು ಕಡತದಲ್ಲಿ ಅಳವಡಿಸಿಕೊಂಡಿದ್ದೆ. ಸದರಿ ದಾಖಲೆ ಈಗಾಗಲೇ ನಿಪಿ.118 ಎದಯಿ ಗುರುತಿಸಿದ್ದು ಸಾಕ್ಷಿಯ ಸಹಿ ನಿಪಿ.118(ಬಿ) ಎಂದು ಗುರುತಿಸಲಾಯಿತು.

6. ಅದೇ ದಿನ 2 ನೇ ಆರೋಪಿ ವಾಸ ಇದ್ದ ಎಂದು ಹೇಳುವ ದಾರವಾಡ ವಿಳಾಸದ ವಾಸದ ಮನೆಗೆ ಪಂಚರಾದ ಚಾಸಾ.6 ಮತ್ತು 7 ರವರೆ ಜೊತೆ ಬೆಳೆಗ್ಗೆ 1.30 ಕ್ಕೆ ಹೋಗಿದ್ದೆ ಪಂಚರ ಸಮಕ್ಷಮ 1.30 ರಿಂದ 2.30 ರವರೆಗೆ 2 ನೇ ಆರೋಪಿ ಮನೆ ಶೋದನೆಗಾಗಿ ನ್ಯಾಯಾಲಯದ ಆದೇಶದಂತೆ ಶೋದಿಸಿದ್ದು ಯಾವುದೇ ನಗದು , ಬಂಗಾರ , ದಾಖಲೆಗಳು ಇರಲಿಲ್ಲ ಆ ಬಗ್ಗೆ ಸ್ತಳದಲ್ಲಿ ಪಂಚನಾಮೆ ಜರುಗಿಸಿದ್ದೆ ಸದರಿ ಪಂಚನಾಮೆ ಸಾಕ್ಷಿ ಗುರುತಿಸಿದ್ದು ಈಗಾಗಲೇ ನಿಪಿ.116 , 117 ಸಾಕ್ಷಿಯ ಸಹಿಗಳನ್ನು ನಿಪಿ.116(ಎ), 117(ಎ) ಎಂದು ಗುರುತಿಸಲಾಯಿತು.

7. ದಿಃ01.03.2012 ರಂದು ಸಾಕ್ಷಿ ಮಾನಸ ರಂಜನ್ ದಾಸ್ ರವರು ಠಾಣೆಗೆ ಹಾಜರಾಗಿ 21 ಅಸಲು ಬಂಗಾರದ ಖಾತೆಗೆ ಸಂಬಂದಿಸಿದ ದಾಖಲೆಗಳನ್ನು ನೀಡಿದ್ದು ಚಾಸಾ.4 ಮತ್ತು 5 ರವರ ಸಮಕ್ಷಮ ಸಂಜೆ 5.30 ರಿಂದ 7 ಗಂಟೆವರೆಗೆ ಅಮಾನತ್ ಪಂಚನಾಮೆ ಜರುಗಿಸಿ ಅಮಾನತ್ ಪಡಿಸಿಕೊಂಡಿದ್ದೆ. ಸದರಿ ಅಮಾನತ್ ಪಂಚನಾಮೆ ಈಗಾಗಲೇ ನಿಪಿ.4 ಎಂದು ಗುರುತಿಸಿದ್ದು ಸಾಕ್ಷಿಯ ಸಹಿ ನಿಪಿ.4(ಬಿ)

ಎಂದು ಗುರುತಿಸಲಾಯಿತು. ನಿಪಿ.4 ರಡಿ ಹಾಜರುಪಡಿಸಿರುವ ದಾಖಲೆಗಳನ್ನು ಸಾಕ್ಷಿ ಗುರುತಿಸಿದ್ದು ಈಗಾಗಲೇ ನಿಪಿ.91 ರಿಂದ 111 ಎಂದು ಗುರುತಿಸಲಾಗಿದೆ.

8. ಅದೇ ದಿನ 6 ನೇ ಆರೋಪಿಗೆ ಸಂಬಂದಿಸಿದ ವಾಸದ ಮನೆ ಚಿತ್ರದುರ್ಗದ ದೊಡ್ಡಪೇಟೆಯಲ್ಲಿ ಇದ್ದು ಸದರಿ ಮನೆ ಶೋದಕ್ಕಾಗಿ ನ್ಯಾಯಾಲಯದ ಆದೇಶದ ಮೇರೆಗೆ ಪಂಚರಾಗಿ ಚಾಸಾ.12 ಮತ್ತು 13 ರವರೊಟ್ಟಿಗೆ ಬೆಳಗ್ಗೆ 11 ಗಂಟೆಗೆ ಬೇಟಿ ನೀಡಿ ಮನೆ ಶೋದಿಸಿದ್ದು ಯಾವುದೇ ಹಣ ,ಬಂಗಾರ ಮತ್ತು ದಾಖಲೆಗಳು ಇರಲಿಲ್ಲ ಕಾರಣ ಸ್ತಳದಲ್ಲಿ 11 ಗಂಟೆಯಿಂದ 11.45 ರವರೆಗೆ ಸ್ತಳ ಪಂಚನಾಮೆ ಜರುಗಿಸಿದ್ದೆ ಸಾಕ್ಷಿ ಗುರುತಿಸಿದ್ದು ಈಗಾಗಲೇ ನಿಪಿ.112 ಮತ್ತು 113 ಎಂದು ಗರುತಿಸಿದ್ದು ಸಾಕ್ಷಿ ಸಹಿಗಳನ್ನು ನಿಪಿ.112(ಬಿ) ಮತ್ತು 113(ಬಿ) ಎಂದು ಗುರುತಿಸಲಾಯಿತು.

9. ಅದೇ ದಿನ 7 ನೇ ಆರೋಪಿಗೆ ಸಂಬಂದಿಸಿದ ವಾಸದ ಮನೆ ಚಿತ್ರದುರ್ಗದ ನೆಹರುನಗರದಲ್ಲಿ ಇದ್ದು ಸದರಿ ಮನೆ ಶೋದಕ್ಕಾಗಿ ನ್ಯಾಯಾಲಯದ ಆದೇಶದ ಮೇರೆಗೆ ಪಂಚರಾಗಿ ಚಾಸಾ.14 ಮತ್ತು 15 ರವರೊಟ್ಟಿಗೆ ಮದ್ಯಾಹ್ನ 12.30 ಗಂಟೆಗೆ ಬೇಟಿ ನೀಡಿ ಮನೆ ಶೋದಿಸಿದ್ದು ಯಾವುದೇ ಹಣ ,ಬಂಗಾರ ಮತ್ತು ದಾಖಲೆಗಳು ಇರಲಿಲ್ಲ ಕಾರಣ ಸ್ತಳದಲ್ಲಿ 12.30 ಗಂಟೆಯಿಂದ 1.15 ರವರೆಗೆ ಸ್ತಳ ಪಂಚನಾಮೆ ಜರುಗಿಸಿದ್ದೆ ಸಾಕ್ಷಿ ಗುರುತಿಸಿದ್ದು ಈಗಾಗಲೇ ನಿಪಿ.114 ಮತ್ತು 115 ಎಂದು ಗರುತಿಸಿದ್ದು ಸಾಕ್ಷಿ ಸಹಿಗಳನ್ನು ನಿಪಿ.114(ಬಿ) ಮತ್ತು 115(ಬಿ) ಎಂದು ಗುರುತಿಸಲಾಯಿತು.

10. ಅದೇ ದಿನ 2 ನೇ ಆರೋಪಿಗೆ ಸಂಬಂದಿಸಿದ ವಾಸದ ಮನೆ ಚಿತ್ರದುರ್ಗದ ಐಯುಡಿಪಿ ಲೇಔಟ್ ಇದ್ದು ಸದರಿ ಮನೆ ಶೋದಕ್ಕಾಗಿ ನ್ಯಾಯಾಲಯದ ಆದೇಶದ ಮೇರೆಗೆ ಪಂಚರಾಗಿ ಚಾಸಾ.10 ಮತ್ತು 11 ರವರೊಟ್ಟಿಗೆ ಬೆಳಗ್ಗೆ 9.30 ಗಂಟೆಗೆ ಬೇಟಿ ನೀಡಿ ಮನೆ ಶೋದಿಸಿದ್ದು ಯಾವುದೇ ಹಣ ,ಬಂಗಾರ ಮತ್ತು ದಾಖಲೆಗಳು ಇರಲಿಲ್ಲ ಕಾರಣ ಸ್ತಳದಲ್ಲಿ 9.30 ಗಂಟೆಯಿಂದ 10.00 ರವರೆಗೆ ಸ್ತಳ

ಪಂಚನಾಮೆ ಜರುಗಿಸಿದ್ದೆ ಸಾಕ್ಷಿ ಗುರುತಿಸಿದ್ದು ಈಗಾಗಲೇ ನಿಪಿ.120 ಮತ್ತು 121 ಎಂದು ಗರುತಿಸಿದ್ದು ಸಾಕ್ಷಿ ಸಹಿಗಳನ್ನು ನಿಪಿ.120(ಎ) ಮತ್ತು 121(ಎ) ಎಂದು ಗುರುತಿಸಲಾಯಿತು.

11. ದಿಃ10.03.2012 ರಂದು ಚಾಸಾ.18 ರವರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿದ್ದೆ. 05.06.2012 ರಂದು 1 ನೇ ಆರೋಪಿಗೆ ಸಂಬಂದಿಸಿದ ವಾಸದ ಮನೆ ತುಮಕೂರು ಗುಬ್ಬಿ ತಾಲ್ಲೂಕು, ನಿಟ್ಟೂರು ಹೋಬಳಿ , ತ್ಯಾಗಟೂರು ಗ್ರಾಮದಲ್ಲಿ ಇದ್ದು ಸದರಿ ಮನೆ ಶೋದಕ್ಕಾಗಿ ನ್ಯಾಯಾಲಯದ ಆದೇಶದ ಮೇರೆಗೆ ಪಂಚರಾಗಿ ಚಾಸಾ.16 ಮತ್ತು 17 ರವರೊಟ್ಟಿಗೆ ಬೆಳಗ್ಗೆ 11.45 ಗಂಟೆಗೆ ಬೇಟಿ ನೀಡಿ ಮನೆ ಶೋದಿಸಿದ್ದು ಯಾವುದೇ ಹಣ ,ಬಂಗಾರ ಮತ್ತು ದಾಖಲೆಗಳು ಇರಲಿಲ್ಲ ಕಾರಣ ಸ್ತಳದಲ್ಲಿ 11.45 ಗಂಟೆಯಿಂದ 01.00 ರವರೆಗೆ ಸ್ತಳ ಪಂಚನಾಮೆ ಜರುಗಿಸಿದ್ದೆ ಸಾಕ್ಷಿ ಗುರುತಿಸಿದ್ದು ಈಗಾಗಲೇ ನಿಪಿ.122 ಮತ್ತು 123 ಎಂದು ಗರುತಿಸಿದ್ದು ಸಾಕ್ಷಿ ಸಹಿಗಳನ್ನು ನಿಪಿ.122(ಎ) ಮತ್ತು 123(ಎ) ಎಂದು ಗುರುತಿಸಲಾಯಿತು.

12. ದಿಃ17.03.2012 ರಂದು ಚಾಸಾ.19 ರಿಂದ 21 ರವರುಗಳನ್ನು ವಿಚಾರಣೆ ಮಾಡಿ ಹೇಳಿಕೆಗಳನ್ನು ಪಡೆದಿದ್ದೆ.ದಿಃ20.03.2012 ರಂದು ಚಾಸಾ.23, 24 ರವರುಗಳನ್ನು ವಿಚಾರಣೆ ಮಾಡಿ ಹೇಳಿಕೆಗಳನ್ನು ಪಡೆದಿದ್ದೆ. ದಿಃ30.03.2012 ರಂದು ಚಾಸಾ.22 ರವರ ವಿಚಾರಣೆ ಮಾಡಿ ಹೇಳಿಕೆ ಪಡೆದಿದ್ದೆ.

13. ದಿಃ24.04.2012 ರಂದು 3 ನೇ ಆರೋಪಿ ನ್ಯಾಯಾಲಯದ ಜಾಮೀನಿನ ಮೇಲೆ ಹಾಜರಾಗಿದ್ದು ದಸ್ತಗಿರಿ ಕ್ರಮ ಜರುಗಿಸಿ ದಸ್ತಗಿರಿ ಮಾಡಿ ಅದೇಶದ ಮೇರೆಗೆ ಸೂಕ್ತ ಬಂಧ ಪತ್ರ ಪಡೆದು ಬಿಡುಗಡೆ ಮಾಡಿದ್ದೆ. 27.04.2012 ರಂದು ಚಾಸಾ.28 ರಿಂದ 31 ರವರುಗಳನ್ನು ವಿಚಾರಣೆ ಮಾಡಿ ಹೇಳಿಕೆಗಳನ್ನು ಪಡೆದಿದ್ದೆ. ದಿಃ29.04.2012 ರಂದು ಚಾಸಾ.25 ರವರ ವಿಚಾರಣೆ ಮಾಡಿ ಹೇಳಿಕೆ ಪಡೆದಿದ್ದೆ. ದಿಃ18.06.2012 ರಂದು ಆರೋಪಿಗಳು ಐಸಿಐಸಿಐ ಬ್ಯಾಂಕ್ ನಲ್ಲಿ ಉದ್ಯೋಗಿಗಳಾಗಿ ನೇಮಕಾತಿ ಹೊಂದಿದ ಬಗ್ಗೆ ಕಾನ್ಫಿಡೆನ್ಷಿಯಲ್ ವರದಿ ಪಡೆದು

ಕಡತದಲ್ಲಿ ಅಳವಡಿಸಿಕೊಂಡಿದೆ. 6 ಕಾನ್ಫಿಡೆನ್ಷಿಯಲ್ ವರದಿಗಳನ್ನು ಸಾಕ್ಷಿ ಗುರುತಿಸಿದ್ದು 6 ವರದಿಗಳ ಜರಾಕ್ಸ ಪ್ರತಿಗಳನ್ನು ನಿಪಿ.132 ರಿಂದ 137 ಎಂದು ಗುರುತಿಸಲಾಯಿತು. ನನಗೆ ವರ್ಗಾವಣೆ ಆಗಿದ್ದು ಕಾರಣ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ.36 ರವರಿಗೆ ಹಸ್ತಾಂತರಿಸಿದ್ದೆ. ಸಾಕ್ಷಿ ಆರೋಪಿತರುಗಳನ್ನು ನ್ಯಾಯಾಲಯದ ಸಮಕ್ಷಮ 1 ರಿಂದ 3 , 5 ಮತ್ತು 7 ನೇ ಆರೋಪಿಗಳನ್ನು ಗುರುತಿಸಿದ್ದು 4 ನೇ ಆರೋಪಿಯ ಗುರುತಿನ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ಅರ್ಜಿ ಸಲ್ಲಿಸಿದ್ದು ಗುರುತಿನ ಬಗ್ಗೆ ತಕರಾರು ಇಲ್ಲ ಕಾರಣ ಅರ್ಜಿ ಪುರಸ್ಕರಿಸಿದ್ದು ಗುರುತಿಸಿರುತ್ತಾರೆ.

**ಪಾಟೀ ಸವಾಲು 3 ಮತ್ತು 7 ನೇ ಆರೋಪಿತರ ಪರ ಶ್ರೀಮತಿ ಎಂ ಬಿ ವಕೀಲರಿಂದಃ**

14. 18.02.2012 ರಂದುಚಾಸಾ.1 ಠಾಣೆಗೆ ಹಾಜರಾಗಿ ದೂರು ನೀಡುವ ಪೂರ್ವದಲ್ಲಿ ಐಸಿಐಸಿಐ ಬ್ಯಾಂಕ್ ನಲ್ಲಿ ಈ ಪ್ರಕರಣಕ್ಕೆ ಸಂಬಂದಿಸಿದ ಘಟನೆ ನಡೆದಿತ್ತು ಎಂಬ ಬಗ್ಗೆ ಮಾಹಿತಿ ಇಲ್ಲ ಮತ್ತು ಯಾವುದೇ ದೂರು ಸಹ ಠಾಣೆಗೆ ಬಂದಿರಲಿಲ್ಲ. ಚಾಸಾ.1 ದೂರನ್ನು ಖುದ್ದಾಗಿ ತಯಾರಿಸಿಕೊಂಡು ಬಂದ ಬಗ್ಗೆ ಮಾಹಿತಿ ನೀಡಿದ್ದರು. ನಿಪಿ.2 ರಲ್ಲಿ ಚಾಸಾ.1 ರವರ ಪದನಾಮ ಕಾಣಿಸಿದ್ದು ಆ ಬಗ್ಗೆ ದಾಖಲೆ ಹಾಜರುಪಡಿಸಲಿಲ್ಲ. ದೂರಿನ ಆದಾರದ ಮೇಲೆ ದಿಃ21.02.2012 ಕ್ಕೆ ಸ್ತಳಕ್ಕೆ ಬೇಟಿ ನೀಡಿದ್ದೆ. ಠಾಣೆಯಿಂದ ಘಟನೆ ನಡೆದಿತ್ತು ಎಂದು ಹೇಳುವ ಐಸಿಐಸಿಐ ಬ್ಯಾಂಕ್ ನ ಅಂತರ ಸುಮಾರು 1 ಕಿಮೀ ಇರಬಹುದು. ವಾಹನಕ್ಕೆ ಸ್ತಳಕ್ಕೆ ಹೋದರೆ 5 ನಿಮಿಷದ ಕಾಲಾವದಿ , ಕಾಲ್ನಡಿಗೆಯಲ್ಲಿ ಹೋದರೆ ಸುಮಾರು 15 ನಿಮಿಷದ ಕಾಲಾವದಿ ಎಂದರೆ ಇರಬಹುದು.

15. ನಾನು 21.02.2012 ರಂದು ಬ್ಯಾಂಕ್ ಗೆ ಬೇಟಿ ನೀಡಿದಾಗ ಬ್ಯಾಂಕ್ ನ ವ್ಯವಹಾರ ಸ್ತಗಿತಗೊಂಡಿತ್ತು ಆದರೆ ಬಾಗಿಲು ಮುಚ್ಚಿರಲಿಲ್ಲ ಸಿಬ್ಬಂದಿ ಇದ್ದರು ಇತರರು ಯಾರು ಇದ್ದರು ನನಗೆ ಹೇಳಲಾಗುವುದಿಲ್ಲ ಕಾರಣ ದೂರಿನ ಆದಾರದ

ಮೇಲೆ ಸ್ಥಳಕ್ಕೆ ಬೇಟಿ ನೀಡಿ ಪಿರ್ಯಾದಿ ತೋರಿಸಿದ ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡುವ ಕ್ರಮ ನನ್ನದು ಮಾತ್ರ ಎಂದು ನುಡಿಯುತ್ತಾರೆ. ಪಂಚನಾಮೆ ಕಾಲದಲ್ಲಿ ಬ್ಯಾಂಕ್ ನಲ್ಲಿ ಅಳವಡಿಸಿದ್ದ ಸಿಸಿ ಟಿವಿ ಪುಟೇಜ್ ನಾನು ನನ್ನ ತನಿಖಾ ಕಾಲದಲ್ಲಿ ಪಡೆಯಲಿಲ್ಲ. ಪಂಚನಾಮೆಗೆ ಬ್ಯಾಂಕ್ ನಲ್ಲಿ ಹಾಜರಿದ್ದ ಸಿಬ್ಬಂದಿಗಳ ಸಹಿ ಪಡೆಯಲಿಲ್ಲ. 18.02.2012 ರಂದುದೂರು ನೀಡಿದ್ದು 21.02.2012 ರಂದು ಸ್ಥಳಕ್ಕೆ ಹೋಗಿದ್ದು ತಡ ಪಂಚನಾಮೆ ಮಾಡಿದ ಬಗ್ಗೆ ಏನು ಕಾರಣ ಎಂದರೆ ಇತರೆ ಕಾರ್ಯಗಳು ಕಾನೂನು ಸುವ್ಯವಸ್ತೆಯಡಿ, ವಿಐಪಿ ಬೇಟಿ ಇತರೆ ಕರ್ತವ್ಯಗಳಲ್ಲಿ ನಿಯೋಜನೆ ಮಾಡಿದ್ದಿರಬಹುದು ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ.

16. ದಿಃ21.02.2012 ರಂದು ನಾನು ಸ್ಥಳ ಪಂಚನಾಮೆಗೆ ಬ್ಯಾಂಕಿ ಗೆ ಬೇಟಿ ನೀಡಿದಾಗ ಮಾನಸ ರಂಜನ್ ದಾಸ್ ಹಾಜರಿರಲಿಲ್ಲ. 28.02.2012 ರಂದು ಸದರಿ ಮಾನಸ ರಂಜನ್ ದಾಸ್ ಠಾಣೆಗೆ ಹಾಜರಾಗಿ ದಾಖಲೆಗಳನ್ನು ಹಾಜರುಪಡಿಸಿದ್ದು ಹಾಜರುಪಡಿಸುವಂತೆ ತಿಳಿಸಿ ಆತನಿಗೆ ಯಾವುದೇ ನೋಟೀಸ್ ನೀಡಿರಲಿಲ್ಲ. 21.02.2012 ರ ಪಂಚನಾಮೆ ಕಾಲಕ್ಕೆ ಪಂಚರಾಗಿ ಬರುವಂತೆ ಯಾವುದೇ ನೋಟೀಸ್ ಪಂಚರಿಗೆ ನೀಡಿರಲಿಲ್ಲ ಆದರೆ ಮೌಖಿಕವಾಗಿ ತಿಳಿಸಿದ್ದೆ. 28.02.2012 ರಂದು ಮಾನಸ ರಂಜನ್ ದಾಸ್ ನೀಡಿದ ದಾಖಲೆಗಳನ್ನು ಅಮಾನತ್ ಪಂಚನಾಮೆಯಡಿ ಅಮಾನತ್ ಪಡಿಸಿಕೊಂಡಿದ್ದೆ ಆದರೆ ಆತನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿಲ್ಲ.

17. ನಿಪಿ.3 ರಲ್ಲಿ ರೀಜನಲ್ ಮ್ಯಾನೇಜರ್ ಹಾಜರುಪಡಿಸಿದ ದಾಖಲೆ ಎಂದು ಕಾಣಿಸಿದ್ದು ಆ ಬಗ್ಗೆ ಸದರಿ ಹಾಜರುಪಡಿಸಿದ ವ್ಯಕ್ತಿಯ ಪದನಾಮೆಗೆ ಸಂಬಂದಿಸಿದಂತೆ ದಾಖಲೆ ಪಡೆದುಕೊಳ್ಳಲಿಲ್ಲ. 01.03.2012 ರಂದು ಮಾನಸ ರಂಜನ್ ದಾಸ್ ಠಾಣೆಗೆ ಹಾಜರಾಗಿ ಪುನಃ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದರೆ ಸರಿ. ದಿಃ28.02.2012, 01.03.2012 ರಂದು ಮಾನಸ ರಂಜನ್ ದಾಸ್

ಹಾಜರುಪಡಿಸಿದ ದಾಖಲೆಗಳು ಯಾರ ವಶದಲ್ಲಿದ್ದು ಅವುಗಳನ್ನು ಹಾಜರುಪಡಿಸುತಿದ್ದೇನೆ ಎಂದು ತಿಳಿಸಿದ್ದರಾ ಎಂದರೆ ಸಾಕ್ಷಿ ಬ್ಯಾಂಕ್ ನಲ್ಲಿ ಒಳ ವಿಚಾರಣೆ ನಡೆದಿದ್ದು ಆ ಸಂಬಂದ ಆತನೇ ದಾಖಲೆಗಳನ್ನು ಪರಿಶೀಲಿಸಿ ತಯಾರಿಸಿ ಹಾಜರುಪಡಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಸದರಿ ಮಾನಸ ರಂಜನ್ ದಾಸ್ ಎರಡು ದಿನಾಂಕಗಳಡಿ ಹಾಜರುಪಡಿಸಿದ ದಾಖಲೆಗಳನ್ನು ನಿಪಿ.2 ದೂರಿನ ಜೊತೆ, ದೂರಿ ಕಾಲಕ್ಕೆ ಹಾಜರುಪಡಿಸಿರಲಿಲ್ಲ.

18. 28.02., 01.03.2012 ರ ಪಂಚನಾಮೆಗಳನ್ನು ಸಿಬ್ಬಂದಿ ಮುಖೇನ ತಯಾರಿಸಿದೆ. ಸದರಿ ಪಂಚನಾಮೆಗಳನ್ನು ಯಾರು ತಯಾರಿಸಿದ್ದು ಎಂಬ ಬಗ್ಗೆ ಪದನಾಮೆ ಮತ್ತು ಸಹಿ ಇಲ್ಲ ಎಂದರೆ ಸರಿ. ದಿಃ21.02.2012 ರಂದು ಚಾಸಾ.1 ರವರ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿದು ಆ ಸಮಯದಲ್ಲಿ ಬಂಗಾರದ ಖಾತೆಗಳಿಗೆ ಸಂಬಂದಿಸಿದ ಕೀ ಗಳನ್ನಾಗಲಿ, ರಿಜಿಸ್ಟರ್ ಗಳನ್ನಾಗಲಿ ಹಾಜರುಪಡಿಸಿರಲಿಲ್ಲ. ಚಾಸಾ.1 ರವರಿಗೆ ಕನ್ನಡ ಬಾಷೆ ಓದಲು ಬರೆಯಲು ಬರುತ್ತದಾ ಇಲ್ಲವಾ ಎಂಬ ಬಗ್ಗೆ ವಿಚಾರಿಸಿ ಪಂಚನಾಮೆಯಲ್ಲಿ ಆ ಬಗ್ಗೆ ಕಾಣಿಸಿಲ್ಲ ಎಂದರೆ ಸರಿ.

19. 1, 5 ರಿಂದ 7 ನೇ ಆರೋಪಿಗಳನ್ನು ದಿಃ27.02.2012 ರಂದು ವಶಕ್ಕೆ ಪಡೆದ ಬಗ್ಗೆ ಪಂಚನಾಮೆ ಜರುಗಿಸಿದ್ದಿರಾ ಎಂದರೆ ಸಾಕ್ಷಿ ದಾಳಿ ನಡೆಸಿ , ವಶಕ್ಕೆ ಪಡೆದು ದಸ್ತಗಿರಿ ಕ್ರಮ ಜರುಗಿಸಿದ್ದೆ ದಸ್ತಗಿರಿ ಕ್ರಮಕ್ಕೆ ಪಂಚನಾಮೆ ಮಾಡುವ ಕ್ರಮ ಇಲ್ಲ ಎಂದು ನುಡಿಯುತ್ತಾರೆ . ವಿಜ್ಞಾನ ಕಾಲೇಜಿನ ಬಳಿ 7 ನೆ ಆರೋಪಿಯನ್ನು ವಶಕ್ಕೆ ಪಡೆದಿಲ್ಲ ಬದಲಿಗೆ ಆತನನ್ನು ಆತನ ಮನೆಯಿಂದ ಕರೆಸಿದ್ದು ಎಂದರೆ ಸರಿಯಲ್ಲ. ದಿಃ21.02.2012 ರಂದು ನಾನು ಸ್ಥಳಕ್ಕೆ ಹೋಗಿಲ್ಲ , ಸ್ಥಳದಲ್ಲಿ ಯಾವುದೇ ಪಂಚನಾಮೆ ಜರುಗಿಸಿಲ್ಲ ಠಾಣೆಯಲ್ಲಿ ತಯಾರು ಮಾಡಿದ್ದು ಎಂದರೆ ಸರಿಯಲ್ಲ. ದಿಃ01.03.2012 ರಂದು 7 ನೇ ಆರೊಪಿಯ ಮನೆಗೆ ಶೋದನಾ ವಾರಂಟ್ ನಡಿ ಬೇಟಿ ನೀಡಿದಾಗ 7 ನೇ ಆರೊಪಿ ಜೊತೆ ಮನೆಯಲ್ಲಿ ಹೆಂಗಸರುಗಳು ಇದ್ದರು ಆದರೆ ಸಂಬಂದ ನನಗೆ ಹೇಳಲಾಗುವುದಿಲ್ಲ .

20. ದಿಃ01.03.2012 ರಂದು 7 ನೇ ಆರೋಪಿಯ ಮನೆಯಲ್ಲಿ ನಿಪಿ.114 ರಂತೆ ಪಂಚನಾಮೆ ಜರುಗಿಸಿದ್ದು ಸದರಿ ದಾಖಲೆ ಸಿಬ್ಬಂದಿ ವೆಂಕಟೇಶ ಬರವಣಿಗೆ ಮಾಡಿದ್ದರು, ನನ್ನ ಉಕ್ತಲೇಖನದ ಮೇರೆಗೆ ಮಾಡಿದ್ದು ಸಹಿ ಆತ ಮಾಡಿಲ್ಲ. ಸದರಿ ನಿಪಿ.114 ಅಡಿ ಕಾಣಿಸಿರುವ ಮನೆ 7 ನೇ ಆರೋಪಿಗೆ ಸೇರಿದ್ದು ಎಂದು ಹೇಳುವ ಬಗ್ಗೆ ದಾಖಲೆ ಹಾಜರುಪಡಿಸಿಲಲ ಕಾರಣ ದಾಖಲೆ ಪಡೆದಿರಲಿಲ್ಲ. ನಿಪಿ.114 ಸ್ತಳಕ್ಕೆ ಹೋಗಿ ಸ್ತಳದಲ್ಲಿ ತಯಾರು ಮಾಡಿದ್ದಲ್ಲ ಠಾಣೆಯಲ್ಲಿ ತಯಾರು ಮಾಡಿದ್ದು ಎಂದರೆ ಸರಿಯಲ್ಲ. ನಿಪಿ.114 ಕ್ಕೆ ಸಂಬಂದಿಸಿದಂತೆ , 7 ನೇ ಆರೋಪಿಗೆ ಸಂಬಂದಿಸಿದ ಯಾವುದೇ ಸಾಕ್ಷಿದಾರರುಗಳನ್ನು ವಿಚಾರಣೆ ಮಾಡಿಲ್ಲ, ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

21. ನಿಖರವಾಗಿ ಇದೇ ಆರೋಪಿ ಎಂದು ಆರೋಪಿಗಳನ್ನು ನನಗೆ ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲು ಃ** 2 ಮತ್ತು 4 ನೇ ಆರೋಪಿಗಳ ಪರ ವಕೀಲರು ಹಿರಿಯ ವಕೀಲರು ಇಲ್ಲ ಕಾರಣ 1 ನೇ ಆರೋಪಿ ಪರ ಪಾಟೀಸವಾಲು ಮಾಡಿದ ನಂತರ ಪಾಟೀಸವಾಲು ಮಾಡುವುದಾಗಿ ಶ್ರೀಮತಿ ಎಸ್ ಕೆ ರವರು ಕಾಲಾವಕಾಶ ಕೋರಿದ್ದು ಕಾರಣ ಸಕಾರಣ ಅಲ್ಲ ಕಾರಣ ಪಾಟೀಸವಾಲು ಇಲ್ಲಎಂದು ತೆಗೆದುಕೊಳ್ಳಲಾಗಿದ್ದೆ ತಕ್ಷಣ ಮಾನ್ಯ ವಕೀಲರು ನಾನು ಪಾಟೀಸವಾಲು ಮಾಡಲು ಸಿದ್ದ ಎಂದು ನುಡಿದಿದ್ದು ಅನುಮತಿ ನೀಡಲಾಗಿದೆ.

**ಪಾಟೀಸವಾಲು ಃ2 ಮತ್ತು 4 ನೇ ಆರೋಪಿ ಪರ ವಕೀಲರಿಂದ**

22. ದಿಃ29.02.2012 ರಂದು 2 ನೇ ಆರೋಪಿ ವಾಸದ ಮನೆಗೆ ಬೇಟಿ ನೀಡಿಲ್ಲ ನಿಪಿ.116 ರಂತೆ ಯಾವುದೇ ಪಂಚನಾಮೆ ಮಾಡಿಲ್ಲ ಠಾಣೆಯಲ್ಲಿ ತಯಾರು ಮಾಡಿದ್ದು ಎಂದರೆ ಸರಿಯಲ್ಲ. ಸದರಿ ಮನೆ 2 ನೇ ಆರೋಪಿಗೆ ಸೇರಿದ್ದು ಎಂಬ ಬಗ್ಗೆ ಯಾವುದೇ ದಾಖಲೆ ಪಡೆದಿಲ್ಲ. ನಿಪಿ.116 ಕ್ಕೆ ಅಕ್ಕಪಕ್ಕದ ವಾಸಿಗಳನ್ನು ಪಂಚರಾಗಿ

ಬರಮಾಡಿಕೊಳ್ಳಲು ಮಾಹಿತಿ ನೀಡಿದ್ದೆ ಆದರೆ ಸಹಕರಿಸಲಿಲ್ಲ ಕಾರಣ ಪಡೆದಿಲ್ಲ. 2 ನೇ ಆರೋಪಿ ಐಸಿಐಸಿಐ ಬ್ಯಾಂಕ್ ನ ಬಂಗಾರದ ಖಾತೆಯ ಕೀ ಹೋಲ್ಡರ್ ಆಗಿ ಕೆಲಸ ಮಾಡುತಿದ್ದರು ಎಂಬ ಬಗ್ಗೆ ದಾಖಲೆ ನನ್ನ ತನಿಖಾ ಕಾಲದಲ್ಲಿ ಪಡೆದಿಲ್ಲ.

23. 2 ನೇ ಆರೋಪಿ ಬ್ಯಾಂಕ್ ಆಪರೇಶನ್ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸುತಿದ್ದರು ಎಂಬ ಬಗ್ಗೆ ನನ್ನ ತನಿಖಾ ಕಾಲದಲ್ಲಿ ದಾಖಲೆ ಪಡೆದಿಲ್ಲ. ದಿಃ19.08.2010 ರ ಕಾಲಕ್ಕೆ 2 ನೇ ಆರೊಪಿ ಐಸಿಐಸಿಐ ಚಿತ್ರದುರ್ಗ ಶಾಖೆಯಲ್ಲಿ ಬ್ಯಾಂಕ್ ಆಪರೇಶನ್ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸುತ್ತ ಇರಲೇ ಇಲ್ಲ ಬದಲಿಗೆ ಹುಬ್ಬಳ್ಳಿ ಶಾಖೆಯಲ್ಲಿ ವ್ಯವಸ್ತಾಪಕರಾಗಿ ಕಾರ್ಯನಿರ್ಹಿಸುತಿದ್ದರು ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ. 2 ನೇ ಆರೋಪಿ ಕೀ ಕಸ್ಟೊಡಿಯನ್ ಎಂಬ ಬಗ್ಗೆ ಯಾವುದೇ ದಾಖಲೆಗಳನ್ನು ಬ್ಯಾಂಕ್ ನಿಂದ ನನ್ನ ತನಿಖಾ ಕಾಲದಲ್ಲಿ ಪಡೆದಿಲ್ಲ. ಜುಲೈ 04 2011 ರಲ್ಲಿ 2 ನೇ ಆರೋಪಿ ಐಸಿಐಸಿಐ ಚಿತ್ರದುರ್ಗ ಶಾಖೆಗೆ ನಿಯುಕ್ತಿ ಗೊಂಡಿದು ಕೇವಲ 6 ತಿಂಗಳ ಅವದಿ ಅಂದರೆ ಡಿಸೆಂಬರ್ 2011 ರವರೆಗೆ ಮಾತ್ರ ಆತ ಸದರಿ ಶಾಖೆಯಲ್ಲಿ ಕಾರ್ಯನಿರ್ವಹಿಸಿದ್ದು ಎಂದರೆ ಮಾಹಿತಿ ಇಲ್ಲ.

24. 2 ಮತ್ತು 4 ನೇ ಆರೋಪಿಯನ್ನು ದಸ್ತಗಿರಿ ಮಾಡಿಲ್ಲ ಬ್ಯಾಂಕ್ ನಲ್ಲಿ ಕಾರ್ಯನಿರ್ವಹಿಸುತಿದ್ದು ವಶಕ್ಕೆ ಪಡೆದಿದ್ದೆ ಎಂದರೆ ಸರಿಯಲ್ಲ. ನಿಪಿ.116 ಕ್ಕೆ ಸಂಬಂದಿಸಿದಂತೆ ಪಂಚನಾಮೆಗೆ ಪಂಚರಾಗಿ ಬರುವಂತೆ ಪಂಚರಿಗೆ ನೋಟೀಸ್ ನೀಡಿಲ್ಲ ಆದರೆ ಮೌಖಿಕವಾಗಿ ತಿಳಿಸಿದ್ದೆ. ಚಾಸಾ.1 ಠಾಣೆಗೆ ಹಾಜರಾಗಿಲ್ಲ ಠಾಣೆಯಲ್ಲಿ ಯಾವುದೆ ದೂರು ನೀಡಿಲ್ಲ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.1 ದೂರಿಗೆ ಪೂರಕವಾಗಿ ಯಾವುದೇ ಮುಂದುವರೆದ ದೂರು ಹೇಳಿಕೆ ನೀಡಿಲ್ಲ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ತಳಕ್ಕೆ ಹೋಗಿಲ್ಲ ಸ್ತಳದಲ್ಲಿ ಯಾವುದೇ ಪಂಚರನ್ನು ಬರಮಾಡಿಕೊಂಡಿಲ್ಲ , ನಿಪಿ.116 ರಂತೆ ಸ್ತಳ ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. 28.02.2012 ರಂದು ಮಾನಸ ರಂಜನ್ ದಾಸ್ ಠಾಣೆಗೆ ಹಾಜರಾಗಿಲ್ಲ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಅಮಾನತ್

ಪಂಚನಾಮೆಯಡಿ ಅಮಾನತಿ ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ದಿಃ01.03.2012 ರಂದು ಸದರಿ ಮಾನಸ ರಂಜನ್ ದಾಸ್ ಠಾಣೆಗೆ ಹಾಜರಾಗಿಲ್ಲ ಪಂಚನಾಮೆಯಡಿ ಅಮಾನತ್ ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಮನೆಗೆ ಬೇಟಿ ನೀಡಿಲ್ಲ ಯಾವುದೇ ಶೋದನಾ ವಾರಂಟ್ ನಡಿ ಶೋದಿಸಿಲ್ಲ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

25. ನಿಪಿ.4 ದಾಖಲೆ ಯಡಿ ಯಾವುದೇ ದಾಖಲೆಗಳನ್ನು ಚಾಸಾ.5 ಮತ್ತು 6 ರವರ ಸಮಕ್ಷಮ ಅಮಾನತ್ಪಡಿಸಿಕೊಂಡಿಲ್ಲ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ದಿಃ10.03.2012 ರಂದು ಚಾಸಾ.19 ರಿಂದ 21 ರವರುಗಳನ್ನು ವಿಚಾರಣೆ ಮಾಡಿಲ್ಲ ಹೇಳಿಕೆ ಪಡೆದಿಲ್ಲ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. 30.03.2012 ರಂದು ಚಾಸಾ.22 ರವರನ್ನು ವಿಚಾರಣೆ ಮಾಡಿಲ್ಲ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ದಿಃ20.03.2012 ರಂದು ಚಾಸಾ.23 ಮತ್ತು 24 ರವರನ್ನು ವಿಚಾರಣೆ ಮಾಡಿಲ್ಲ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಈ ಕೇಸಿನಲ್ಲಿ ಯಾವುದೇ ಸಾಕ್ಷಿದಾರರುಗಳನ್ನು ವಿಚಾರಣೆ ಮಾಡಿಲ್ಲ ಹೇಳಿಕೆ ಪಡೆದಿಲ್ಲ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

26. ಯಾವುದೇ ಆಡಿಟ್ ವರದಿ ಚಾಸಾ.21 ಹಾಜರುಪಡಿಸಿಲ್ಲ ನಾನು ಪಡೆದಿಲ್ಲ ಎಂದರೆ ಸರಿಯಲ್ಲ. 2 ಮತ್ತು 4 ನೇ ಆರೋಪಿಗಳು ಯಾವುದೇ ಆರೋಪಣೆ ದೂರಿನಲ್ಲಿ ಕಾಣಿಸಿರುವಂತೆಮಾಡಿಲ್ಲ ಆಬಗ್ಗೆ ನನಗೆ ತನಿಖಾ ಕಾಲದಲ್ಲಿ ತಿಳಿದಿದು ಚಾಸಾ.1 ರವರ ಒತ್ತಡಕ್ಕೆ ಮಣಿದು ಸುಳ್ಳು ದೂರು ದಾಖಲು ಮಾಡಿಕೊಂಡು ಸುಳ್ಳು ಪ್ರ ವ ವರದಿ ತಯಾರಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ನ್ಯಾಯಾಲಯದ ಸಮಯ 2 ಗಂಟೆ ಕಾರಣ 5 ನೇ ಆರೋಪಿಗಳ ಪಾಟೀಸವಾಲಿಗೆ ಮದ್ಯಾಹ್ನ 2.45 ಕ್ಕೆ ಕಾಯ್ದಿರಿಸಲಾಗಿದೆ.**

**ನ್ಯಾಯಾಲಯದ ಅನುಮತಿ ಮೇರೆಗೆ ಮಾನ್ಯ ಅಬಿಯೋಜಕರು ಮುಂದುವರೆದ ಮುಖ್ಯ ವಿಚಾರಣೆ ಅನಮುತಿ ನೀಡಬೇಕೆಂದು ಕೋರಿದ್ದು ನೀಡಲಾಗಿದೆ.**

**ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸ ಸ ಅ ರವರಿಂದ ಃ-**

ನಿಪಿ.124 ಮತ್ತು 125 ರಂತೆ ಚಾಸಾ.19 ಮತ್ತು ಚಾಸಾ.26 ರವರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತೇನೆ.

**ಪಾಟೀಸವಾಲು 5 ನೇ ಆರೋಪಿ ಪರ ಶ್ರೀಮತಿ ಡಿ ಕೆ ಎಸ್ ವಕೀಲರಿಂದ ಃ-**

27. ದೂರು ದಾಖಲು ಮಾಡಿದ ನಂತರ ಅದರ ಆದಾರದ ಮೇಲೆ ತನಿಖೆ ಆರಂಬಿಸಿದ್ದು ತನಿಖೆ ಪ್ರಾರಂಬಗೊಂಡ ಬಗ್ಗೆ ಯಾವ ಯಾವ ಹಂತದಲ್ಲಿ ತನಿಖೆ ಸಾಗುತ್ತಿದೆ ಎಂಬ ಬಗ್ಗೆ ಸಿಡಿ ಯಲ್ಲಿನಮೂದಿಸುವ ಕ್ರಮ. ಸಿಡಿ ದಾಖಲೆಯಲ್ಲಿ ದಿನಾಂಕ ದಿಃ29.11.2011 ರಿಂದ 03.01.2012 ರ ಮದ್ಯದಲ್ಲಿ ಕೃತ್ಯ ನಡೆದಿದೆ ಎಂಬ ಬಗ್ಗೆ ಕಾಣಿಸಿದೆ ಎಂದರೆ ಸರಿ. 5 ನೇ ಆರೋಪಿ ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಚಿತ್ರದುರ್ಗ ಶಾಖೆ ಐಸಿಐಸಿಐ ಬ್ಯಾಂಕ್ ನಲ್ಲಿ ಯಾವ ಪದನಾಮೆಯಲ್ಲಿ ಕಾರ್ಯನಿರ್ವಹಿಸುತಿದ್ದರು ಎಂಬ ಬಗ್ಗೆ ನನ್ನ ತನಿಖಾ ಕಾಲದಲ್ಲಿ ವಿಚಾರಣೆ ಮಾಡಿಲ್ಲ, ದಾಖಲೆ ಪಡೆದಿಲ್ಲ.

28. 5 ನೇ ಆರೋಪಿ ಯಾವ ಯಾವ ಕರ್ತವ್ಯ ಮತ್ತು ಜವಾಬ್ದಾರಿ ಐಸಿಐಸಿಐ ಬ್ಯಾಂಕ್ ಚಿತ್ರದುರ್ಗ ಶಾಖೆಯಲ್ಲಿ ಸೇವೆ ಸಲ್ಲಿಸುತಿದ್ದರು ಎಂಬ ಬಗ್ಗೆ ಹಿರಿಯ ಅದಿಕಾರಿಗಳಿಂದ ಮಾಹಿತಿ ನನ್ನ ತನಿಖಾ ಕಾಲದಲ್ಲಿ ಪಡೆದಿಲ್ಲ ಮತ್ತು ದಾಖಲೆಗಳನ್ನು ಸಹ ಪಡೆದಿಲ್ಲ. ದಿಃ18.02.2012 ರಂದು ದೂರು ನೀಡುವ ಕಾಲಕ್ಕೆ ಸದರಿ ದೂರಿನಲ್ಲಿ 5 ನೇ ಆರೋಪಿ ವಿರುದ್ದ ಯಾವುದೇ ದೂರು ಹೇಳಿಕೆ ನೀಡಿಲ್ಲ ಎಂದರೆ ಸರಿ. ಪ್ರ ವ ವರದಿಯಲ್ಲಿ ಸಹ 5 ನೇ ಆರೋಪಿಯನ್ನು ಆರೋಪಿಯಾಗಿ ಕಾಣಿಸಿರಲಿಲ್ಲ ಎಂದರೆ ಸರಿ . ನಿಪಿ.128 ರಂತೆ ಚಾಸಾ.1 ಮುಂದುವರೆದ ದೂರು ಹೇಳಿಕೆ ನೀಡಿದ

ಕಾಲಕ್ಕೆ ಸದರಿ ದೂರಿನಲ್ಲಿ 5 ನೇ ಆರೋಪಿ ತಕರಾರು ಖಾತೆ ತೆರೆಯುವ ಕಾಲಕ್ಕೆ ಶಾಖಾದಿಕಾರಿಯಾಗಿದ್ದು ಕಾರಣ ಅವರ ಪಾತ್ರ ಇರಬಹುದು ಎಂದು ಅನುಮಾನ ಇದೆ ಕಾರಣ ತನಿಖೆ ಮಾಡಬೇಕು ಎಂಬ ಬಗ್ಗೆ ಕಾಣಿಸಿದೆ ಎಂದರೆ ಸರಿ.

29. ದಿಃ05.08.2011 ರಂದು 5 ನೇ ಆರೋಪಿ ಚಿತ್ರದುರ್ಗ ಐಸಿಐಸಿಐ ಶಾಖೆಗೆ ತಮ್ಮ ರಾಜಿನಾಮೆ ನೀಡಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ರಾಜೀನಾಮೆ ಪತ್ರದ ಆದಾರದ ಮೇಲೆ 5 ನೇ ಆರೋಪಿಯನ್ನು ದಿಃ14.11.2011 ರಂದು ರಾಜೀನಾಮೆ ಪತ್ರ ಸ್ವೀಕರಿಸಿ ಆತನನ್ನು ಶಾಖೆಯಿಂದ ಪದಮುಕ್ತ ಗೊಳಿಸಿ ಶಾಖೆಯಿಂದ ಬಿಡುಗಡೆ ಮಾಡಿದ್ದಾರೆ ಎಂದರೆ ಆ ಬಗ್ಗೆ ಮಾಹಿತಿ ಇಲ್ಲ. 5 ನೇ ಆರೋಪಿ ರಾಜೀನಾಮೆ ನೀಡಿದ್ದು ಕಾರಣ ಈ ಪ್ರಕರಣಕ್ಕೂ ಆತನಿಗೂ ಯಾವುದೇ ಸಂಬಂದ ಇಲ್ಲ ಆ ಬಗ್ಗೆ ನನ್ನ ತನಿಖಾ ಕಾಲದಲ್ಲಿ ಸರಿಯಾಗಿ ತನಿಖೆ ಮಾಡದೇ ನಿಪಿ.128 ರ ಆದಾರದ ಮೇಲೆ ಸುಳ್ಳು ತನಿಖೆ ಕೈಗೊಂಡು ಸುಳ್ಳು ಸಾಕ್ಷ್ಯ ನುಡಿಯು ತಿದ್ದೇನೆ ಎಂದರೆ ಸರಿಯಲ್ಲ.

30. ನಿಪಿ.2 ರಲ್ಲಿ ದಿಃ26/27.12.2011 ರ ಕಾಲಕ್ಕೆ ಬಂಗಾರದ ಪಾಕೆಟ್ ಗಳು ಯತಾಸ್ತಿತಿಯಲ್ಲಿದ್ದು ಯಾವುದೇ ಲೋಪದೋಷಗಳು ಇಲ್ಲ (discrepancies) ಇಲ್ಲ ಎಂದು ಕಾಣಿಸಿದೆ ಎಂದರೆ ಸರಿ. ಆ ಬಗ್ಗೆ ರೀಜನಲ್ ರಿಸ್ಕ ಮ್ಯಾನೇಜರ್ ರವರು ವರದಿಯಲ್ಲಿ ಕಾಣಿಸಿದ್ದಾರೆ ಎಂಬ ಬಗ್ಗೆ ಸಹ ನಿಪಿ.2 ರಲ್ಲಿ ಕಾಣಿಸಿದೆ ಎಂದರೆ ಸರಿ. 34 ಜುಯಲ್ ಪಾಕೆಟ್ ಗಳು ಯಾವ ದಿನಾಂಕದಿಂದ ಕಳೆದುಹೋಗಿದೆ ಎಂಬ ಬಗ್ಗೆ ನಿಪಿ.2 ರಲ್ಲಿ ಕಾಣಿಸಿಲ್ಲ ಎಂದರೆ ಸರಿ. ಚಾಸಾ.25 ಅಕ್ಕಸಾಲಿಗ ವರದಿಗಾಗಿ ಆಡಿಟ್ ರಿಪೊರ್ಟ ಬಂದಾಗ ಚಿನ್ನದ ಹೊರೆ ಹಚ್ಚುವಿಕೆ ಬಗ್ಗೆ ಚಿನ್ನದ ಪಾಕೆಟ್ ಗಳನ್ನು ಹಾಜರುಮಾಡುವ ಬಗ್ಗೆ ತಿಳಿಸಿದ್ದು ಆ ಕಾರಣ ದಿಃ07.02.2012 ರಂದು 34 ಚಿನ್ನದ ಪಾಕೆಟ್ ಗಳನ್ನು ಲಾಕರ್ ನಿಂದ ತೆಗೆಯಲು ಹೋದಾಗ ಸದರಿ ಚಿನ್ನದ ಪಾಕೆಟ್ ಗಳು ಕಳೆದಿವೆ ಎಂಬ ಬಗ್ಗೆ ಗಮನಕ್ಕೆ ಬಂತು ಎಂದು ತಮ್ಮ ಹೇಳಿಕೆಯಲ್ಲಿ ಹೇಳಿದ್ದಾರೆ ಎಂದರೆ ಸರಿ . ಸದರಿ ಬಾಗವನ್ನು ಸಾಕ್ಷಿಗೆ ಓದಿ

ಹೇಳಲಾಗಿ ಸಾಕ್ಷಿ ಒಪ್ಪಿದ್ದು 'ದಿಃ06.02.2012 ರಂದು ದಾರವಾಡದಿಂದ -------------34 ಪಾಕೆಟ್ ಗಳು ಕಾಣೆಯಾಗಿದ್ದವು' ಸದರಿ ಬಾಗವನ್ನು ನಿಡಿ.1 ಎಂದು 5 ನೇ ಆರೋಪಿ ಪರ ಗುರುತಿಸಲಾಗಿರುತ್ತದೆ.

31. ದಿಃ07.02.2012 ರ ಕಾಲಕ್ಕೆ ಅಖಿಲೇಶ್ ಸದರಿ ಚಿನ್ನದ ಪಾಕೆಟ್ ಗಳಿದ್ದ ಲಾಕರ್ ನ ಕೀ ಕಸ್ಟೋಡಿಯರ್ ಆಗಿದ್ದರು ಎಂದು ಚಾಸಾ.25 ತಮ್ಮ ಹೇಳಿಕೆಯಲ್ಲಿ ಹೇಳಿದ್ದಾರೆ ಎಂದರೆ ಸರಿ. ದಿಃ07.02.2012 ರ ಕಾಲಕ್ಕೆ 5 ನೇ ಆರೋಪಿ ಚಿತ್ರದುರ್ಗ ಐಸಿಐಸಿಐ ಬ್ಯಾಂಕ್ ನಲ್ಲಿ ಯಾವುದೇ ಪದನಾಮೆಯಡಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಸದರಿ ದಿನಾಂಕಕ್ಕೆ ಆತ ರಾಜೀನಾಮೆ ನೀಡಿದ್ದು ಸ್ವೀಕರಿಸಿದ್ದು ಬಿಡುಗಡೆ ಹೊಂದಿದ್ದರು ಎಂದರೆ ಸರಿಯಲ್ಲ. 5 ನೇ ಆರೋಪಿ ಐಸಿಐಸಿಐ ಬ್ಯಾಂಕ್ ಚಿತ್ರದುರ್ಗ ಶಾಖೆಯಲ್ಲಿ ಯಾವ ಪದನಾಮೆಯಡಿ ಕಾರ್ಯನಿರ್ವಹಿಸುತಿದ್ದಾರೆ ದಾಖಲೆ ಕೊಡುವಂತೆ ಮತ್ತು ಅವರನ್ನು ಯಾವ ಕರ್ತವ್ಯಕ್ಕೆ ನೇಮಿಸಿದೆ ಎಂಬ ಬಗ್ಗೆ ದಾಖಲೆ ನೀಡುವಂತೆ ಬ್ಯಾಂಕ್ ನವರಿಗೆ ಮುಂದುವರೆದ ದೂರು ಹೇಳಿಕೆ ಪಡೆದ ನಂತರ ಕೇಳಿದ್ದೇನೆ ಎಂದರೆ ಸರಿ.

32. 5 ನೇ ಆರೋಪಿ ಐಸಿಐಸಿಐ ಬ್ಯಾಂಕ್ ಚಿತ್ರದುರ್ಗ ಶಾಖೆಯಲ್ಲಿ ಅತರೈಜಡಿ ಸಿಗ್ನೆಟರಿಯಾಗಿ ಸಹಿ ಮಾಡುವುದನ್ನು ಹೊರತುಪಡಿಸಿ ಯಾವ ಖಾತೆ ದಾರ, ಗ್ರಾಹಕರು ಯಾರು ಯಾರು ಸದರಿ ಖಾತೆದಾರರು ಮತ್ತು ಗ್ರಾಹಕರುಗಳ ಬಗ್ಗೆ ವಿಚಾರಣೆ ನಡೆಸುವ ಕರ್ತವ್ಯ ವ್ಯಾಪ್ತಿ ಇರುವುದಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. 5 ನೇ ಆರೋಪಿ ಕರ್ತವ್ಯ ಏನು ಎಂಬ ಬಗ್ಗೆ ನನ್ನ ತನಿಖಾ ಕಾಲದಲ್ಲಿ ನಾನು ತನಿಖೆ ಮಾಡಬೇಕಿದ್ದು ದಾಖಲೆ ಸಹ ಪಡೆಯುವ ಜವಾಬ್ದಾರಿ ನನ್ನದಾಗಿತ್ತು ಎಂದರೆ ತನಿಖೆ ಸಮಯದಲ್ಲಿ ಅಗತ್ಯತೆ ಕಂಡುಬಂದಿಲ್ಲ ಕಾರಣ ಮಾಡಿಲ್ಲ ಇತರೆ ತನಿಖಾದಿಕಾರಿಗಳು ಮಾಡಿರಬಹುದು. ಚಿತ್ರದುರ್ಗ ಶಾಖೆ ಐಸಿಐಸಿಐ ಬ್ಯಾಂಕ್ ನಲ್ಲಿ ಚಿನ್ನದ 34 ಬ್ಯಾಂಕ್ ಖಾತೆಗಳಿದ್ದು ಸದರಿ ಖಾತೆಗಳಲ್ಲಿ 34 ಚಿನ್ನದ ಪಾಕೆಟ್ ಗಳಿದ್ದು ಸದರಿ ಚಿನ್ನದ ಪಾಕೆಟ್ ಗಳು ಕಾಣೆಯಾಗಿವೆ ಎಂಬ ಬಗ್ಗೆ ದೂರು ನೀಡಿದ್ದು ಅದಕ್ಕೆ ಪೂರಕವಾಗಿ ಪ್ರ ವ ವರದಿ,

ಅಂತಿಮ ವರದಿ ಸಲ್ಲಿಸಿರುವುದಾ ಎಂದರೆ ಸಾಕ್ಷಿ ಸದರಿ ಚಿನ್ನ ದುರುಪಯೋಗಪಡಿಸಿಕೊಂಡಿದ್ದಾರೆ ಕಾರಣ ಕಾಣೆಯಾಗಿದೆ ಎಂದು ತನಿಖೆ ಕೈಗೊಂಡಿರುವುದು ಎಂದು ಉತ್ತರಿಸುತ್ತಾರೆ.

33. 34 ಪೇಕ್ ಖಾತೆಗಳನ್ನು ತೆರೆದು ಸದರಿ ಖಾತೆಗಳಿಗೆ ಸಂಬಂದಿಸಿದಂತೆ 34 ಪೇಕ್ ಖಾತೆದಾರರರುಗಳನ್ನು ಖಾತೆದಾರರುಗಳ ಹೆಸರನ್ನು ಕಾಣಿಸಿ ಸದರಿ ಖಾತೆಗಳಲ್ಲಿನ 34 ಚಿನ್ನದ ಪಾಕೆಟ್ಗಳನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಆರೋಪಣೆಯಾ ಎಂದರೆ ಸಾಕ್ಷಿ 34 ಖಾತೆಗಳು ನಿಜವಾದ ಖಾತೆಗಳೇ ಆದರೆ ಬ್ಯಾಂಕ್ ನ ಆಡಿಟ್ ಮುಕ್ತಾಯಗೊಂಡ ನಂತರ ಚಿನ್ನದ ಪಾಕೆಟ್ ಗಳನ್ನು ದುರುಪಯೋಗಪಡಿಸಿಕೊಂಡಿರುವುದು ಎಂದು ಆರೋಪ. 34 ಖಾತೆಗಳು ಪೇಕ್ ಮತ್ತು 34 ಖಾತೆದಾರರುಗಳು ಪೇಕಾ ಎಂದರೆ ಸಾಕ್ಷಿ ಖಾತೆಗಳು ನಿಜ ಖಾತೆಗಳು ಆದರೆ ಖಾತೆದಾರರುಗಳು ಪೇಕ್ ಎಂದು ಉತ್ತರಿಸುತ್ತಾರೆ.

34. 34 ಪೇಕ್ ಖಾತೆದಾರರುಗಳ ಬಗ್ಗೆ ದಾಖಲೆಯಲ್ಲಿ ಕಾಣಿಸಿದ್ದು ಸದರಿ ಖಾತೆದಾರರುಗಳ ಇರುವಿಕೆ ಬಗ್ಗೆ , ಸದರಿ ಖಾತೆದಾರರುಗಳ ವಿವರಣೆ ಬಗ್ಗೆ ತನಿಖಾ ಕಾಲದಲ್ಲಿ ವಿಚಾರಣೆ ನಡೆಸಿ ಅಂತಹ ಖಾತೆದಾರರುಗಳ ಹೇಳಿಕೆಗಳನ್ನು ಪಡೆದುಕೊಂಡಿರಾ ಎಂದರೆ ಸಾಕ್ಷಿ ಅಂತಹ ಖಾತೆದಾರರುಗಳೇ ಇರಲಿಲ್ಲ ವಿಳಾಸ ಹೆಸರು ಎಲ್ಲವೂ ಪೇಕ್ ಆಗಿದ್ದವು ಕಾರಣ ವಿಚಾರಣೆ ಮಾಡುವುದಾಗಲಿ ಹೇಳಿಕೆ ಮಾಡಿಕೊಳ್ಳುವುದಾಗಲಿ ಪ್ರಮೇಯ ಇಲ್ಲ ಎಂದು ನುಡಿಯುತ್ತಾರೆ. ಖುದ್ದು ತನಿಖೆ ನಡೆಸಿದ್ದು ಅದರ ಆದಾರದ ಮೇಲೆ ಖಾತೆದಾರರುಗಳ ಹೆಸರು ಮತ್ತು ವಿಳಾಸ ಸುಳ್ಳು ಎಂದು ನುಡಿಯುತಿದ್ದೇನೆ.

35. ಯಾವುದೇ ಸೃಷ್ಟಿಸಿದ ಖಾತೆದಾರರು ಗಳು ಇಲ್ಲ ಎಲ್ಲ ಖಾತೆಗಳು ಮತ್ತು ಖಾತೆದಾರರುಗಳು ನಿಜವಾದ ಖಾತೆದಾರರುಗಳೇ ಆ ಬಗ್ಗೆ ತನಿಖಾ ಕಾಲದಲ್ಲಿ ಸರಿಯಾಗಿ ತನಿಖೆ ಮಾಡದೇ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. 34 ಖಾತೆಗಳು ಮತ್ತು ಖಾತೆದಾರರುಗಳು ನಿಜವಾದ ಖಾತೆ ಮತ್ತು ಖಾತೆದಾರರುಗಳು

ಆಗಿದ್ದ ಕಾರಣದಿಂದಲೇ ದಿಃ26/27.12.2011 ರ ಕಾಲಕ್ಕೆ ಸದರಿ ಖಾತೆಗಳು ಯತಾಸ್ತಿಯಲ್ಲಿ ಇದ್ದು ಸದರಿ ಖಾತೆಗಳಲ್ಲಿದ್ದ ಚಿನ್ನದ ಪಾಕೆಟ್ ಗಳು ಯತಾಸ್ತಿಯಲ್ಲಿವೆ ಎಂಬ ಬಗ್ಗೆ ಆಡಿಟ್ ವರದಿ ಸಹ ಬ್ಯಾಂಕ್ ನಲ್ಲಿ ನೀಡಲಾಗಿದೆ ಎಂದರೆ ಸರಿಯಲ್ಲ.

36. ನನ್ನ ತನಿಖೆ ಪ್ರಕಾರ ನಟರಾಜ್ ಬಿನ್ ರಂಗಪ್ಪ ಕೆಳಗೋಟೆ ವಾಸಿ ಚಿತ್ರದುರ್ಗ ಸದರಿ ವ್ಯಕ್ತಿ ಸಹ 34 ಖಾತೆಗಳಿಗೆ ಸಂಬಂದಿಸಿದ ಒಬ್ಬ ಖಾತೆದಾರ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ನಟರಾಜ್ ಕನ್ಸುಮರ್ ಫೋರಂ ನಲ್ಲಿ ನಾನು ನಿಜ ಖಾತೆದಾರ ಸೃಷ್ಟಿಸಿದ ಖಾತೆದಾರ ಎಂದು ದೂರು ದಾಖಲಾಗಿದ್ದು ನನ್ನ ಖಾತೆಗೆ ಸಂಬಂದಿಸಿದ ಬಂಗಾರ ಮರಳಿಸಿ ಅಥವಾ ಬಂಗಾರದ ಮೌಲ್ಯ ಹಣದ ರೂಪದಲ್ಲಿ ನೀಡುವಂತೆ ಅರ್ಜಿ ಸಲ್ಲಿಸಿ ಆದೇಶ ಸಹ ಆತನ ಪರ ಪಡೆದಿದ್ದಾರೆ ಎಂದರೆ ನನ್ನ ತನಿಖಾ ಕಾಲದಲ್ಲಿ ಮಾಹಿತಿ ನೀಡಿಲ್ಲ.

37. ದಿಃ21.02.2012 ರಂದು ಸ್ತಳ ತನಿಖೆ ಕಾಲಕ್ಕೆ ಬ್ಯಾಂಕ್ ನ 4 ದಿಕ್ಕಿನಲ್ಲಿ ಸಿಸಿ ಟಿವಿ ಅಳವಡಿಸಿರುವ ಬಗ್ಗೆ ನಾನು ತನಿಖಾ ಕಾಲದಲ್ಲಿ ಗಮನಿಸಿಲ್ಲ ಆ ಬಗ್ಗೆ ಪಂಚನಾಮೆಯಲ್ಲಿ ಕಾಣಿಸಿಲ್ಲ. ಬ್ಯಾಂಕ್ ನ 4 ಕಡೆ ಅದರಲ್ಲೂ ನಗದು ಮತ್ತು ಬಂಗಾರ ಇಟ್ಟಿರುವ ಲಾಕರ್ ಕಡೆ ಹೆಚ್ಚಿನ ಸಿಸಿ ಟಿವಿ ಕ್ಯಾಮೆರಾ ಕಣ್ಗಾವಲಿದ್ದು ಬ್ಯಾಂಕ ನಎಲ್ಲ ಒಳ ವ್ಯವಹಾರಗಳು ಸದರಿ ಕ್ಯಾಮೆರಾ ಕಣ್ಗಾವಲಿನಲ್ಲಿ ನಡೆಯುತ್ತದೆ ಎಂದರೆ ಮಾಹಿತಿ ಇಲ್ಲ. ನನ್ನ ತನಿಖಾ ಕಾಲದಲ್ಲಿ ಸಿಸಿ ಟಿವಿ ಕ್ಯಾಮೆರಾ ಅಳವಡಿಸಿರುವ ಬಗ್ಗೆ, ಫುಟೇಜ್ ಬಗ್ಗೆ ನಾನು ವಿಚಾರಣೆ ಮಾಡಿಲ್ಲ ಮತ್ತು ದಾಖಲೆ ಪಡೆದಿಲ್ಲ.

38. ಸಿಸಿ ಟಿವಿ ಕ್ಯಾಮೆರಾ ಮತ್ತು ಫುಟೇಜ್ ಬಗ್ಗೆ ವಿಚಾರಿಸಿದ್ದಲ್ಲಿ ಸದರಿ ಫುಟೇಜ್ ಪೂರಕ ಸಾಕ್ಷ್ಯ ವಾಗುತಿತ್ತು ಉದ್ದೇಶಪೂರ್ವಕವಾಗಿ ಆ ಬಗ್ಗೆ ವಿಚಾರಿಸಿಲ್ಲ ಮತ್ತು ಫುಟೇಜ್ ಪಡೆದಿಲ್ಲ ಎಂದರೆ ಸರಿಯಲ್ಲ.

39. ಸುನಿಲ್ ಕೆ ಎಂಬುವವರು ಸಹಿಯನ್ನು 5 ನೇ ಆರೋಪಿ ಪೊರ್ಜರಿ ಮಾಡಿದ್ದಾರೆ ಎಂದು ನನ್ನ ತನಿಖೆಯಲ್ಲಿ ಕಾಣಿಸಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಗಳನ್ನು ದಸ್ತಗಿರಿ ಕ್ರಮದಡಿ ದಸ್ತಗಿರಿ ಮಾಡಿದ ಕಾಲಕ್ಕೆ ಎಲ್ಲ ಆರೋಪಿಗಳ ಸ್ಪೆಸಿಮನ ಸಹಿಗಳನ್ನು ಮತ್ತು ಬರವಣಿಗೆಗಳನ್ನು ವಿದಿ ವಿಜ್ಞಾನ ಪರೀಕ್ಷೆಗೆ ಕಳುಹಿಸುವ ಸಂಬಂದ ನನ್ನ ತನಿಖಾ ಕಾಲದಲ್ಲಿ ಪಡೆದಿದ್ದೆ. ಸದರಿ ಸಹಿಗಳನ್ನು ಮತ್ತು ಬರವಣಿಗೆಗಳನ್ನು ದಿಃ28.02.2012 ರಂದು ಪಡೆದಿದ್ದೆ. ಸಹಿಗಳನ್ನು ಮತ್ತು ಬರವಣಿಗೆಗಳನ್ನು ಆರೋಪಿಗಳಿಂದ ಪಡೆಯುವ ಬಗ್ಗೆ ಯಾವುದೇ ಪಂಚರ ಸಮಕ್ಷಮ ಪಂಚನಾಮೆ ಮಾಡುವ ಕ್ರಮ ಇಲ್ಲ ಅದು ತನಿಖೆಯ ಬಾಗ. ಆರೋಪಿಗಳು ಸಹಿಗಳನ್ನು ಮತ್ತು ಬರವಣಿಗೆಗಳನ್ನು ಮಾಡುವ ಕಾಲಕ್ಕೆ ಯಾವುದೇ ವಿಡಿಯೋ ಮಾಡಿಲ್ಲ, ಆರೋಪಿಗಳ ಯಾವುದೇ ಸಹಿಗಳನ್ನಾಗಲಿ , ಬರವಣಿಗೆಗಳನ್ನಾಗಲಿ ನನ್ನ ತನಿಖಾ ಕಾಲದಲ್ಲಿ ಪಡೆದಿಲ್ಲ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

40. ಆರೋಪಿಗಳ ಸಹಿ ಮತ್ತು ಬರವಣಿಗಳನ್ನು ಮಾಡಿಕೊಳ್ಳುವ ಕಾಲಕ್ಕೆ ಯಾವ ಯಾವ ಆರೋಪಿ ಯಾರ ಯಾರ ಸಹಿಗಳನ್ನು ಪೊರ್ಜರಿ ಮಾಡಿದ್ದಾರೆ ಸದರಿ ಮೂಲ ವ್ಯಕ್ತಿಗಳನ್ನು ನನ್ನ ತನಿಖಾ ಕಾಲದಲ್ಲಿ ವಿಚಾರಣೆ ಮಾಡಿಲ್ಲ ಕಾರಣ ಆ ಬಗ್ಗೆ ನಾನು ತನಿಖೆ ಮಾಡಿಲ್ಲ. ನಾನು ಹೇಳುವ 34 ಖಾತೆಗಳಲ್ಲಿ ಪೇಕ್ ಖಾತೆ ಎಂದು ಹೇಳುವ ಖಾತೆ 7 ನೇ ಆರೋಪಿಗೆ ಸಂಬಂದಿಸಿದ ಖಾತೆ ಎಂದರೆ ಸರಿಯಲ್ಲ. ಖಾತೆ ಸಹ ನಿಜ ಮತ್ತು ಖಾತೆದಾರರು ಸಹ ನಿಜವಾದ ಖಾತೆದಾರರು ಸುಳ್ಳು ಸಾಕ್ಷಿ ನುಡಿಯು ತಿದ್ದೇನೆ ಎಂದರೆ ಸರಿಯಲ್ಲ.

41. ನಿಪಿ.135 ರಂತೆ 5 ನೇ ಆರೋಪಿ 18.04.2005 ರಂದು ಐಸಿಐಸಿಐ ಬ್ಯಾಂಕ್ ಚಿತ್ರದುರ್ಗ ಶಾಖೆಗೆ ನಿಯುಕ್ತಿಗೊಂಡು 14.11.2011 ರಂದು ರಾಜೀನಾಮೆ ನೀಡಿದ್ದು ಸದರಿ ರಾಜೀನಾಮೆಯನ್ನು ಅಂಗೀಕರಿಸಿ 5 ನೇ ಆರೋಪಿಯನ್ನು ಬಿಡುಗಡೆ ಗೊಳಿಸಿದ್ದಾರೆ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ. ನಿಪಿ.135 ರಲ್ಲಿ 5 ನೇ ಆರೋಪಿ ಬ್ಯಾಂಕ್ ಸೇವೆಗೆ ನಿಯೋಜಿಸಿದ 2005 ರ ಸಾಲಿನಿಂದ 2011 ರಾಜೀನಾಮೆ ಅಂಗೀಕರಿಸುವ ವರೆಗೂ ಯಾವುದೇ ಬ್ಯಾಂಕ್ ವ್ಯವಹಾರಕ್ಕೆ ಸಂಬಂದಿಸಿದಂತೆ ಲೋಪದೊಷಗಳು ಇಲ್ಲ ಲೋಪದೊಷಗಳು ಇದ್ದ ಬಗ್ಗೆ ಸದರಿ

ದಾಖಲೆಯಲ್ಲಿ ಕಾಣಿಸಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ.

42. ಚಾಸಾ.19 ಮತ್ತು 20 ರವರನ್ನು ನಾನು ವಿಚಾರಣೆ ಮಾಡಿಲ್ಲ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಗಿದೆ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**